ಮಂದಾಕಿನಿ ಕೂತೇ ಇದ್ಲು.

ಆದದ್ದಿಷ್ಟೇ. ತುಂಬು ಬಸುರಿ ಮಂದಾಕಿನಿ. ರಾತ್ರೆ ಮಲಗ್ದಾಗ ಎಲ್ಲಾ ಚೆನ್ನಾಗೇ ಇತ್ತು. ಊಟವಾಗಿತ್ತು. ಮಗು ಕೆಂಪಗೆ ಹುಟ್ಲಿ ಅಂತ ಹೇಳಿ ಬಿಸಿ ಹಾಲಿಗೆ ಕೇಸರಿ ಅರಿಸಿನ ಬೆರಸಿ ಕುಡಿದಾಗಿತ್ತು. ಪ್ರತಿದಿನದ ಹಾಗೇ ಆವತ್ತು ಹೊರಳಾಟವಾಗಿರ್ಲಿಲ್ಲ. ಮಲಗಿದ ಕೂಡ್ಲೇ ನಿದ್ದೆ ಹತ್ತಿತ್ತು.

ಮಗು ಹುಟ್ಟಿದೆ. ಸುಂದರವಾಗಿದೆ. ಗಂಡು ಮಗು. ಅತ್ತೆ ಮಾವ ಕುಣೀತಿದ್ದಾರೆ. ಅಪ್ಪ, ಅಮ್ಮ ಸಂಭ್ರಮದಲ್ಲಿ ನಲೀತಿದ್ದಾರೆ. ಗಂಡ ಹೆಮ್ಮೆಯಿಂದ ಮಂದಹಾಸದಲ್ಲಿ 'ಹ್ಯಾಗೇ' ಅನ್ನೋ ಭಾವದಲ್ಲಿ ನೋಡ್ತಾ ಇದ್ದಾನೆ. ಸುಖ ಸಾಧಿಸಿದ ಸಾರ್ಥಕತೆಯ ಭಾವ ಮೈಮನ ತುಂಬಿತ್ತು. 'ನಚಿಕೇತ' ಅಂತ ಹೆಸರಿಡ್ಬೇಕು. ಯಮಧರ್ಮನ ಕುತ್ತಿಗೆ ಪಟ್ಟಿಹಿಡ್ದು ನನ್ನ ಮಗ ಅಮರನಾಗಬೇಕು ಅಂತ ಅನ್ನಿಸ್ತಿದ್ದಾಗ, ಅದೇನೋ ಸಣ್ಣಗೆ ಕಾಲು ಸಂದೀಲಿ ಒದ್ದೆ ಅಂತಾಗಿ ಧಿಗ್ಗಂತ ಎದ್ದಿದ್ಲು. ಕನಸು ಹರ್ದಿತ್ತು. ಸಣ್ಣಗೆ ರಕ್ತಸ್ರಾವವಾಗಿತ್ತು. ಗಂಡನನ್ನೆಬ್ಬಿಸಿದ್ಲು. ಕಾರು ತೆಗ್ದು ಸೀದಾ ನರ್ಸಿಂಗ್ ಹೋಂಗೆ ಬಂದ್ರು.

ಡಾಕ್ಟ್ರಿಗೆ ಫೋನ್ ಹೋಗಿತ್ತು. ಅವರಾಗ್ಲೇ ಸಿಬ್ಬಂದಿ ಸಮೇತ ಸಿದ್ಧರಿದ್ರು. ಬರ್ತಿದ್ದ ಹಾಗೇ ಸ್ಟ್ರೆಚರ್ ಮೇಲೆ ಮಲಗಿಸಿ ತಳ್ಳಿಕೊಂಡು ಹೋಗಿ ಆಪರೇಷನ್ ಥಿಯೇಟರ್ರು ಸೇರಿದ್ರು.

ಮಂದಾಕಿನಿಗೆ ಗಾಬರೀಲಿ ಮಾತಾಡೋ ಧೈರ್ಯ ಆಗ್ಲೇ ಇಲ್ಲ. ಡಾಕ್ಟ್ರನ್ನ ದಿಟ್ಟಿಸ್ತಿದ್ಲು. ಕಣ್ಣಗಲವಾಗಿತ್ತು. ದೈನ್ಯ ಇತ್ತು. "ಇದು ಬೇಕು, ಕಿತ್ಕೋಬೇಡಿ." ಮುಂಗುರುಳು ಕೆದರಿತ್ತು. ತಣ್ಣಗಿನ ಕೊರಿಯೋ ರಾತ್ರೇಲಿ ಹಣೆಮೇಲೆ ಬೆವರ ಚಿತ್ತಾರವಾಯ್ತು. ನೋವಿಗೆ ಹಲ್ಲು ಮಸ್ದಿದ್ಲು. ಮೂಗಿನ ಹೊಳ್ಳೆಗಳಲ್ಲಿ ಬಿಸಿ ಉಸಿರು ಭುಸುಗುಟ್ತಿತ್ತು.

ಮಂದಾಕಿನಿ ಪಾಪ ನೋವಲ್ಲಿದ್ಲಾವತ್ತು. ಡಾಕ್ಟ್ರು ಅದೇನನ್ನೋ ಚುಚ್ಚಿದ ನೆನಪು ಅಷ್ಟೇ. ಮಂಪರಿನ ಜಾರಲ್ಲಿ, ಡಾಕ್ಟ್ರ ತೋಳನ್ನ ಗಟ್ಟಿಯಾಗಿ ಅದುಮಿ, ಕೊನೇ ಮಾತಂದಿದ್ಲು. "ಇದು ಬೇಕು, ಹೊರಗೆ ಗಂಡ ಕಾಯ್ತಿದ್ದಾನೆ. ಇದು ಗಂಡು ಮಗು. ಅದೂ ಗೊತ್ತು. ಅವನಿಗೆ ಇದು ಬೇಕು. ನಾನಲ್ಲ. ಇದು ಬೇಕು ಕೊಟ್ಟುಬಿಡಿ."

ಸತ್ತೇ ಹೋದೆ. ಹೊತ್ತದ್ದನ್ನ ಹೆತ್ತು ಗಂಡನ ಕೈಗಿಟ್ಟು ಸತ್ತೇ ಹೋದೆ ಅನ್ನೋ ಭಾವದಲ್ಲಿ ಮಂಪರಿಗೆ ಜಾರಿದ್ಲು.

ಬಿಳಿ ಬಟ್ಟೆ ತೊಡಿಸಿದ್ರು. ಅದೇನೋ ಇವಳದ್ದೇ ಅಳತೇಲಿ ಹೊಲಿಸಿದ್ರು. ನವುರಾಗಿತ್ತು. ಮೈ ಹಗುರವಾಗಿ ತೇಲ್ತಿತ್ತು. ಎಲ್ಲ ಕಡೆ ಚಳಿ. ಎಲ್ಲಾ ಕಡೆ ಬಿಳಿ. ಆಕಾಶ, ಮೋಡ, ಗಿಡ, ಮರ, ಹೂವು, ಕಾಯಿ, ನೆಲ, ಹುಲ್ಲು, ಕಾಗೆ, ಗಿಳಿ, ಪ್ರಾಣಿಗಳು ಎಲ್ಲಾ ಎಲ್ಲಾ ಬಿಳಿ.

ಸತ್ತು ಸ್ವರ್ಗಕ್ಕೆ ಬಂದಾಯ್ತು. ಇನ್ನು ನೆಮ್ಮದಿ. ಒಂದು ಗಂಡು ಮಗು ಹೆತ್ತು ಗಂಡನ ಕೈಗೆ ಕೊಡಬೇಕಾದ್ದು ಒಂದು ಹೆಣ್ಣಿನ ಕರ್ತವ್ಯ. ಆದ ಹಾಗಾಯ್ತು. ಈಗ ನೆಮ್ಮದಿ ಅಂತ ಅಂದ್ಕೊಂಡು ಕಣ್ಣು ಬಿಟ್ಳು. ಹಾಸಿಗೇಲಿದ್ಲು. ಬಿಳಿ ಹಾಸಿಗೆ. ಬಿಳಿ ಬೆಡ್‌ಶೀಟು, ಬಿಳಿ ಮಂಚ, ಬಿಳಿ ಕರ್ಟನ್ನು. ಪಕ್ಕದಲ್ಲಿ ಬಿಳಿ ಉಡುಗೆಯದೇ ನರ್ಸು. ಇವಳು ಕಣ್ಣು ಬಿಟ್ಟದ್ದನ್ನು ಕಂಡು, ನರ್ಸು ಡಾಕ್ಟ್ರನ್ನ ಕರೆಯೋಕೆ ಓಡಿದ್ಲು.

ಮಂದಾಕಿನಿಗೆ ಅರಿವಾಗಿತ್ತು. ತಾನು ಸತ್ತಿಲ್ಲ. ಆಸ್ಪತ್ರೆಯಲ್ಲಿದ್ದೀನಿ ಅಂತ. ಹೊಟ್ಟೆ ಮುಟ್ಕೊಂಡ್ಲು. ಅಲ್ಲೇನಿರ್ಲಿಲ್ಲ. ದೊಡ್ಡ ಬ್ಯಾಂಡೇಜ್ ಇತ್ತು. ಕತ್ತರಿಸಿದ ಹಾಗಿದೆ. ಪಕ್ಕದಲ್ಲಿ ನೋಡಿದ್ಲು. ಮಗು ಇರ್ಲಿಲ್ಲ. ಎಂತಹ ಕ್ರೂರಿಗಳು. ನನ್ನ ಮಗೂನಾ ನನಗೇ ತೋರಿಸ್ದೇ,